

# ಗೌರಿ-ಗಣೇಶ: ಪೂಜೆ, ಬಾಗಿನದ ಸಂಭ್ರಮ!

ಗಣಪತಿ ಬಪ್ಪ ಮೋರಯಾ.. ಹಾಡುವ ಕಾಲ ಇದೀಗ ಸನ್ನಿಹಿತ. ಗೌರಿ–ಗಣೇಶನ ಹಬ್ಬಕ್ಕೆ ತಯಾರಿಯೂ ಜೋರಾಗಿ ನಡೆದಿದೆ. ಹಬ್ಬಕ್ಕೆ ತಿಂಡಿ ತಿನಿಸುಗಳ ಜತೆಗೆ ಅಲಂಕಾರ, ಹೊಸ ಬಟ್ಟೆ, ಪೂಜೆ, ಬಾಗಿನ ಇತ್ಯಾದಿಯೂ ನಡೆಯುತ್ತದೆ.

★ ಯು.ಎ.

ಇದೀಗ ಗೌರಿ ಗಣೇಶ ಹಬ್ಬದ ಸಂಭ್ರಮ. ಹೂವು ಹಣ್ಣುಗಳ ಖರೀದಿ, ಬಗೆ ಬಗೆಯ ಕಜ್ಜಾಯ, ನೈವೇದ್ಯ ತಯಾರಿಕೆ, ಅಲಂಕಾರ ಎಲ್ಲವೂ ಹಬ್ಬದ ಸಂಭ್ರಮ ಇಮ್ಮಡಿಸುತ್ತದೆ. ಪರಂಪರೆಯ ಹಿನ್ನೆಲೆಯನ್ನು ಗಮನಿಸಿದರೆ ಹಿಂದೆಲ್ಲ ಹಳ್ಳಿ ಹಳ್ಳಿಗಳಲ್ಲಿ ಹೂವಿನ ತಟ್ಟೆ, ದೀಪದ ಆರತಿ ಹಿಡಿದು ಪುಟ್ಟ ಮಕ್ಕಳು ಗೌರಿ ಹಬ್ಬದಂದು ಸಂಜೆ ಮನೆ ಮನೆಗೆ ಹೋಗಿ ಸಿಹಿತಿಂಡಿ ವಿನಿಮಯ ಮಾಡಿ ಸಂಭ್ರಮಿಸುತ್ತಿದ್ದರು. ಮರುದಿನ ಗಣೇಶ ಹಬ್ಬದಂದು ಮಕ್ಕಳು ಉಂಡೆ, ಕಡುಬು ತಿಂದು ಬೀಗುತ್ತಿದ್ದರು. ಬಹುಶಃ ಹಳ್ಳಿಗಳಲ್ಲೂ ಈಗ ಆ ಸಂಭ್ರಮ ಮಾಯವಾಗಿದೆ. ಪಟ್ಟಣ, ನಗರ, ಮಹಾನಗರ ಪ್ರದೇಶಗಳಲ್ಲಿ ಗೌರಿ ಗಣೇಶನಿಗೆ ಹೈಟೆಕ್ ಸ್ಪರ್ಶ ಎಡತಾಕಿದೆ. ಆದರೂ ದೈನಂದಿನ ಏಕತಾನತೆ ಮರೆಸಲು, ಊಟ ಉಪಚಾರಗಳಲ್ಲಿ ಬದಲಾವಣೆ ಕಾಣಲು, ಕುಟುಂಬದ ಸದಸ್ಯರ ಮಧ್ಯೆ ಸಾಮರಸ್ಯ ಮೂಡಿಸಲು.. ಒಟ್ಟಿನಲ್ಲಿ ಜೀವನವನ್ನು ಸೌಹಾರ್ದವಾಗಿಸಲು ಹಬ್ಬಗಳ ಆಚರಣೆ ಬೇಕೇ ಬೇಕು.

### ಸ್ವರ್ಣಗೌರಿ ವ್ರತ

ಹಬ್ಬಗಳು ಯಾವುದೇ ಇರಲಿ. ಆಚರಣೆಯ ವಿಭಿನ್ನತೆ, ಊಟ, ತಿಂಡಿಗಳ ವೈವಿಧ್ಯತೆ ಎಲ್ಲವೂ ಆಯಾಯ ಹಬ್ಬವನ್ನು ಅವಲಂಬಿಸಿರುತ್ತದೆ. ದೀಪಾವಳಿಗೆ ಸುಡುಮದ್ದಿನ ಸಡಗರವಾದರೆ, ಗೋಕುಲಾಷ್ಟಮಿಗೆ ಪುಟಾಣಿಗಳ ಕೃಷ್ಣವೇಷದ ಸಂಭ್ರಮ. ಹೋಳಿಗೆ ಬಣ್ಣಗಳ ಎರಚಾಟವಾದರೆ ನವರಾತ್ರಿಗೆ ದೇವಿಯ ಅಲಂಕಾರ, ಶ್ಲೋಕ ಸಂಗೀತಗಳ ಸೌಂದರ್ಯಲಹರಿ. ಈಗ ಬಂದಿರುವ ಗೌರಿ ಗಣೇಶ ಹಬ್ಬಗಳೂ ಇದಕ್ಕೆ ಹೊರತಲ್ಲ. ಗೌರಿ–ಗಣೇಶ ಎಂದು ತಾಯಿ–ಮಗನ ಮೂರ್ತಿ ಇಟ್ಟು, ನೈವೇದ್ಯ ಮಾಡಿ, ಹೋಳಿಗೆ ಊಟ ತಯಾರಿಸಿ, ಹೊಸ ಬಟ್ಟೆ ಧರಿಸಿ ಮನೆ ಮಂದಿಯೆಲ್ಲಾ ಕುಳಿತು ಪೂಜೆ ಮಾಡಿ ಊಟ ಮಾಡಿದರೆ ಹಬ್ಬ ಮುಗಿದಂತೆ.

ಗೌರಿ ಅಲಂಕಾರ ಪ್ರಿಯೆ. ಗೌರಿಯ ಪ್ರತಿಮೆಗೆ ಬಾಳೆ ಕಂಬ, ಮಾವಿನ ತೋರಣದಿಂದ ಮಂಟಪ ಕಟ್ಟಿ, ಹೂವಿನಿಂದ, ಹತ್ತಿ ಹಾರಗಳಿಂದ ಅಲಂಕರಿಸಿ, ಮಧ್ಯೆ 16 ಗಂಟುಗಳನ್ನೊಳಗೊಂಡ ಒಂದು 'ಗೌರಿಧಾರ' ಕಟ್ಟಿ ಹೂವು ಹಣ್ಣುಗಳನ್ನು ಸಮರ್ಪಿಸಿ ಪೂಜೆಯನ್ನು ಶ್ರದ್ಧಾ ಭಕ್ತಿಯಿಂದ ಮಾಡಲಾಗುತ್ತದೆ. ಇದೂ ಹೆಣ್ಣು ಮಕ್ಕಳ ಸಂಭ್ರಮ ಇಮ್ಮಡಿಸಲು ಕಾರಣವಾಗುತ್ತದೆ. ಮಧ್ಯಾಹ್ನ ಸಡಗರದಿಂದ ಹೋಳಿಗೆ ಊಟ ಮಾಡಿ ಸಂಜೆ ಮುತ್ತೈದೆಯರಿಗೆ ಬಾಗಿನ ನೀಡಿ ಆಶೀರ್ವಾದ ಪಡೆದರೆ ಹಬ್ಬ ಪರಿಪೂರ್ಣವಾದಂತೆ. ಕೆಲವು ಕಡೆಗಳಲ್ಲಿ ಅಕ್ಕಿ, ನವ ಧಾನ್ಯ, ರವೆ, ಬೆಲ್ಲ, ತರಕಾರಿಗಳನ್ನೂ ಬಾಗಿನದ ಜತೆಗೆ ನೀಡುವುದೂ ಇದೆ.

ಗಣೇಶನ ಹಬ್ಬ ಸಂಭ್ರಮ ಸಡಗರದ ಜತೆಗೆ ಪರಿಸರದ ಬಗ್ಗೆಯೂ ಹೆಚ್ಚಿನ ಕಾಳಜಿ ವಹಿಸಬೇಕಾದ ಅಗತ್ಯವಿದೆ. ಬಣ್ಣ ಬಣ್ಣದ ಗಣಪನನ್ನು ಖರೀದಿಸುವುದು ಬಿಟ್ಟು ಮಣ್ಣಿನ ಗಣಪನನ್ನೇ ಆರಾಧಿಸಿದರೆ ಒಳಿತು.